ಶ್ರೀ ಎಸ್.ಆರ್. ವಿಶ್ವನಾಥ್:– ಮಾನ್ಯ ಅಧ್ಯಕ್ಷರೆ, ಎರಡೇ ನಿಮಿಷ ಮುಗಿಸಿ ಬಿಡುತ್ತೇನೆ.

ಅಧ್ಯಕ್ಷರು:– ಇಲ್ಲ ನಾಳೆ ಅರ್ಧ ಗಂಟೆ ಚರ್ಚೆಗೆ ಹಾಕಿಕೊಳ್ಳಿ.

ಶ್ರೀ ಎಸ್.ಆರ್. ವಿಶ್ವನಾಥ್:– ಆಗಬಹುದು.

ಅಧ್ಯಕ್ಷರು:– ಆಯಿತು. ಈಗ 'ಶ್ರೀ ಆರ್. ಜಗದೀಶ್ ಕುಮಾರ್ ರವರ ಪ್ರಶ್ನೆ.

ದೇವಸ್ಥಾನಗಳ ಆದಾಯ

164(1827); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 8 ವಾರ್ಡ್‌ಗಳಲ್ಲಿರುವ ಮುಜರಾಯಿ ದೇವಸ್ಥಾನಗಳೆಷ್ಟು; (ವಿವರ ಒದಗಿಸುವುದು)

ಆ) ಕಳೆದ 3 ವರ್ಷಗಳಲ್ಲಿ ಈ ಮುಜರಾಯಿ ದೇವಸ್ಥಾನಗಳಿಂದ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು; (ದೇವಸ್ಥಾನವಾರು ವಿವರ ನೀಡುವುದು)

ಇ) ಈ ಆದಾಯವನ್ನು ಆಯಾ ದೇವಸ್ಥಾನಗಳ ಅಭಿವೃದ್ಧಿಗಾಗಿ ಬಳಸಲಾಗಿದೆಯೇ; ಬಳಸದಿದ್ದಲ್ಲಿ, ದೇವಸ್ಥಾನದ ಅಭಿವೃದ್ಧಿಗಾಗಿ ಬಳಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)

ಈ) ಕಳೆದ ಮೂರು ವರ್ಷಗಳಲ್ಲಿ ಮುಜರಾಯಿ ಮತ್ತು ಮುಜರಾಯಿಯೇತರ ದೇವಸ್ಥಾನಗಳ ಅಭಿವೃದ್ಧಿ/ ಜೀರ್ಣೋದ್ಧಾರಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು? (ದೇವಸ್ಥಾನವಾರು ವಿವರ ನೀಡುವುದು)

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಮಾನ್ಯ ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)

ಅ) ಹೆಬ್ಬಾಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 8 ವಾರ್ಡ್‌ಗಳಲ್ಲಿ ಈ ಕೆಳಕಂಡ 3 ದೇವಾಲಯಗಳು ಇರುತ್ತವೆ.

1. ಶ್ರೀ ಈಶ್ವರ ದೇವಸ್ಥಾನ–ಹೆಬ್ಬಾಳ
2. ಶ್ರೀ ಬಸವೇಶ್ವರ ದೇವಸ್ಥಾನ–ಹೆಬ್ಬಾಳ
3. ಶ್ರೀ ಬಸವೇಶ್ವರ ದೇವರು–ಚೋಲನಾಯ್ಕನಹಳ್ಳಿ

ಆ) ಕಳೆದ ಮೂರು ವರ್ಷಗಳಲ್ಲಿ ಹೆಬ್ಬಾಳ ಗ್ರಾಮದ ಶ್ರೀ ಈಶ್ವರ ದೇವಾಲಯದಿಂದ ಮಾತ್ರ ₹ 26,290/– ಆದಾಯ ಬಂದಿರುತ್ತದೆ.

ಉಳಿದ 2 ದೇವಸ್ಥಾನಗಳಿಂದ ಯಾವ ಆದಾಯವೂ ಬಂದಿರುವುದಿಲ್ಲ.

ಇ) ಸಂಬಂಧಪಟ್ಟ ದೇವಸ್ಥಾನದ ಆದಾಯದಿಂದ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ನಡೆಸಿರುವುದಿಲ್ಲ ಮತ್ತು ಸದರಿ ದೇವಾಲಯಗಳಿಂದ ಯಾವುದೇ ಹೆಚ್ಚಿನ ಆದಾಯ ಇಲ್ಲದಿರುವುದರಿಂದ ಅಭಿವೃದ್ಧಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ.

ಈ) ಹೆಬ್ಬಾಳ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಮುಜರಾಯಿ ಹಾಗೂ ಮುಜರಾಯಿಯೇತರ ದೇವಸ್ಥಾನಗಳಿಗೆ ಅಭಿವೃದ್ಧಿ/ಜೀರ್ಣೋದ್ಧಾರಕ್ಕಾಗಿ ಸರ್ಕಾರ ಯಾವುದೇ ಅನುದಾನವನ್ನು ಮಂಜೂರು ಮಾಡಿರುವುದಿಲ್ಲ.

ಶ್ರೀ ಆರ್. ಜಗದೀಶ್ ಕುಮಾರ್:– ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷದಲ್ಲಿ ನಮ್ಮ ಕ್ಷೇತ್ರಕ್ಕೆ ಯಾವುದೇ ರೀತಿಯ ಅನುದಾನವನ್ನು ಕೊಟ್ಟಿಲ್ಲ. ಈಗ ಕೊಟ್ಟಿರುವ ಅನುದಾನ ಸಾಕಾಗುವುದಿಲ್ಲ. ಒಂದೆರಡು ದೇವಸ್ಥಾನಗಳಿಗೆ ಸ್ವಲ್ಪ ಹೆಚ್ಚಿನ ಅನುದಾನ ಬೇಕಾಗುತ್ತದೆ. ಅದಕ್ಕೆ ನಾವು ಜಿಲ್ಲಾಧಿಕಾರಿಗಳ ಮುಖಾಂತರ ಪ್ರಸ್ತಾವನೆ ಕಳುಹಿಸಿದರೆ ಮಾನ್ಯ ಮಂತ್ರಿಗಳು ನಮಗೆ ಹೆಚ್ಚಿನ ಅನುದಾನವನ್ನು ಕೊಡುತ್ತಾರೆಯೇ ಎಂದು ಕೇಳಲಿಚ್ಚಿಸುತ್ತೇನೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ:– ಮಾನ್ಯ ಅಧ್ಯಕ್ಷರೆ, ಶಾಸಕರ ವಿಧಾನಸಭಾ ಕ್ಷೇತ್ರದಲ್ಲಿ ಶ್ರೀ ಈಶ್ವರ ದೇವಾಲಯ, ಶ್ರೀ ಬಸವೇಶ್ವರ ದೇವಾಲಯ, ಶ್ರೀ ಬಸವೇಶ್ವರ ದೇವರು ಈ ಮೂರು ದೇವಾಲಯಗಳಿದ್ದು, ಇವು 'ಸಿ' ವರ್ಗಕ್ಕೆ ಬರುವುದರಿಂದ ಈ ದೇವಾಲಯಗಳಿಂದ ಯಾವುದೇ ಆದಾಯ ಬರುವುದಿಲ್ಲ. ಆದರೂ ನಾವು 2013–14 ನೇ ಸಾಲಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಈಗಾಗಲೇ 40 ಲಕ್ಷ ರೂ. ಕೊಟ್ಟಿದ್ದೇವೆ, ಈ ಹಣ ಸಾಕಾಗದಿದ್ದರೆ ನೀವು ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಕೊಟ್ಟರೆ ಅದನ್ನು ಪರಿಶೀಲಿಸಿ ಹೆಚ್ಚಿನ ಹಣವನ್ನು ಕೊಡಲು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು:– ಈಗ ತಡೆ ಹಿಡಿಯಲಾದ ಪ್ರಶ್ನೆಗಳು. ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ ರವರ ಪ್ರಶ್ನೆ

ಆ) (i) 7ನೇ ಪಟ್ಟಿಯಿಂದ ವರ್ಗಾವಣೆಗೊಂಡ ಪ್ರಶ್ನೆ